# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103


ಸಂಖ್ಯೆ: ತುವಿ: ಡಿಇವಿ-02:2024-25/2014 . ದಿನಾಂಕ:02.09.2024

## ಸುತ್ತೋಲೆ

**ವಿಷಯ:** ಮತದಾರರ ಸಾಕ್ಷರತಾ ಸಂಘ(ELC) ಹಾಗೂ ಚುನಾವಣಾ ಜಾಗೃತಿ ಸಂಘಗಳಲ್ಲಿ (CJC) ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು

**ಉಲ್ಲೇಖ:**
1. ಅಪರ ಮುಖ್ಯ ಚುನಾವಣಾಧಿಕಾರಿಗಳ ಸುತ್ತೋಲೆ ಸಂಖ್ಯೆ:ಸಿಆಸುಇ/30/SVEEP/2024 ದಿನಾಂಕ:18.06.2024
2. ನೋಡಲ್ ಅಧಿಕಾರಿಗಳು, SVEEP, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಪತ್ರ ದಿನಾಂಕ:09.08.2024
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:02.09.2024 (ಕಂಡಿಕೆ-12)

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(01)ರ ಸುತ್ತೋಲೆಯಲ್ಲಿ ಭಾರತ ಚುನಾವಣಾ ಆಯೋಗವು ನೂತನ ಮತ್ತು ಭವಿಷ್ಯದ ಮತದಾರರಲ್ಲಿ ಚುನಾವಣಾ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ, ಜಾಗೃತಿ ಮೂಡಿಸುವ ಸಲುವಾಗಿ ವಿಶ್ವವಿದ್ಯಾನಿಲಯಗಳು ಸೇರಿದಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತದಾರರ ಸಾಕ್ಷರತಾ ಸಂಘ (Electoral Literacy Club) ಗಳನ್ನು ಈಗಾಗಲೇ ಸ್ಥಾಪಿಸಲಾಗಿದ್ದು, ಪ್ರತಿ ವರ್ಷವೂ ಮಾರ್ಗಸೂಚಿಗಳನ್ವಯ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದಾಗಿ ತಿಳಿಸಿ ಉಲ್ಲೇಖ (01)ರ ಸುತ್ತೋಲೆಯೊಂದಿಗೆ ಅನುಬಂಧ-01 ರಿಂದ 06 ಗಳಲ್ಲಿ ಸೂಚಿಸಿರುವಂತೆ ಮತದಾರರ ಸಾಕ್ಷರತಾ ಸಂಘಗಳಲ್ಲಿ ಮತ್ತು ಚುನಾವಣಾ ಜಾಗೃತಿ ಸಂಘಗಳಲ್ಲಿ ಕ್ರಮಜರುಗಿಸಲು ತಿಳಿಸಿರುತ್ತಾರೆ.

ಈ ಸಂಬಂಧ ಮೇಲ್ಕಂಡ ಉಲ್ಲೇಖ(01)ರ ಸುತ್ತೋಲೆಯನ್ನು ಲಗತ್ತಿಸಿದ್ದು, ಸದರಿ ಸುತ್ತೋಲೆಯಲ್ಲಿನ ಅನುಬಂಧಗಳಲ್ಲಿ ಲಗತ್ತಿಸಿರುವ ಅಂಶಗಳಂತೆ ಅಗತ್ಯ ಕ್ರಮವಹಿಸಲು ಈ ಮೂಲಕ ತಿಳಿಸಲಾಗಿದೆ.

ಆದೇಶದ ಮೇರೆಗೆ

ಉಪಕುಲಸಚಿವರು

ಅಭಿವೃದ್ಧಿ ವಿಭಾಗ

ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು

ಗೆ:
1. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ ಮತ್ತು ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-ಸಂಬಂಧಪಟ್ಟ ಕಾಲೇಜುಗಳಿಗೆ ಇ-ಮೇಲ್ ಕಳುಹಿಸುವುದು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಚೇರಿ ಪ್ರತಿ.